ನೂರಾರು ಮುಖಗಳನ್ನು ಮಾಡಿ ನೋಡಿದೆ. ಆದರೆ ಯಾವುದೂ ಸಮಾಧಾನ ನೀಡಲಿಲ್ಲ. ನನ್ನೆಲ್ಲ ಕೆಲಸಗಳನ್ನು ನಿಲ್ಲಿಸಿ ಇದೊಂದಕ್ಕೇ ನನ್ನೆಲ್ಲ ಟೈಮನ್ನೂ ನೀಡಿದ್ದೆ. ನನ್ನ ಗುರಿ ಒಂದೇ. ಆ ದುಷ್ಟಾತಿದುಷ್ಟನನ್ನು ಶೀಘ್ರವೇ ಸೆರೆಹಿಡಿದು ನೇಣಿಗೇರಿಸಬೇಕೆಂಬುದು. ಹಿಂದೆಲ್ಲ ಬೇಕಾಬಿಟ್ಟಿ ಬರೆದ ಗೆರೆಗಳೇ ಅಪರಾಧಿಯನ್ನು ಹೋಲುತ್ತಿತ್ತಾದರೂ, ಈಗ ಒಂದೇ ಒಂದು ಗೆರೆಯೂ ಅವನ ಚಹರೆಯ ಸಮೀಪಕ್ಕೂ ಹೋಗುತ್ತಿಲ್ಲವೆಂಬುದು ನನ್ನ ಅರಿವಿಗೇ ಬರುತ್ತಿತ್ತು. ನಾನು ಆವೇಶಗೊಂಡಿದ್ದೇನೆ, ಆವೇಗಗೊಂಡಿದ್ದೇನೆ, ಉದ್ವೇಗಗೊಂಡಿದ್ದೇನೆ, ಮಹತ್ವಾಕಾಂಕ್ಷೆಯಿಂದ ಅವನನ್ನು ಹಿಡಿದು ನರಸಿಂಹನಂತೆ ಕರುಳು ಬಗೆಯುವ ಉನ್ಮಾದದಲ್ಲಿ ನನ್ನ ಬೆರಳು ಮತ್ತು ಮನಸ್ಸಿನ ನಡುವೆ ಸಂಪರ್ಕವೇರ್ಪಡುತ್ತಿಲ್ಲ. ಕೂಲ್... ಕೂಲ್... ಎಂದು ನನಗೆ ನಾನೇ ಸಮಾಧಾನಪಡಿಸಿಕೊಂಡೆ. ಧ್ಯಾನ ಮಾಡಲು ಕುಳಿತೆ. ಕಣ್ಣ ಮುಂದೆ ನೂರಾರು ಮುಖಗಳು ತೇಲಿಹೋದವು. ಈಗಿಂದೀಗಲೇ ಎದ್ದು ಅವನ್ನೆಲ್ಲ ಚಿತ್ರಿಸಿಬಿಡುವ ಭರದಲ್ಲಿ ಎದ್ದರೂ ಒಂದೂ ಮತ್ತೆ ನೆನಪಿಗೆ ಬರುತ್ತಿಲ್ಲ. ಕಂಪ್ಯೂಟರಿಗೆ ಆ ಶಕ್ತಿ ಇಲ್ಲವೇನೋ ಎಂದುಕೊಂಡು ಎಂದಿನಂತೆ ಬಿಳಿಯ ಹಾಳೆ, ಪೆನ್ಸಿಲ್ ಕೈಗೆತ್ತಿಕೊಂಡೆ. ಆದರೆ ಬೆರಳುಗಳೇ ನಿಯಂತ್ರಣಕ್ಕೆ ಸಿಗುತ್ತಿಲ್ಲ. ಅವರು ಕೇಳುವ ಮುನ್ನವೇ ನಾನೇ ಆ ಮುಖಬಿಂಬವನ್ನು ಹಿಡಿದುಕೊಂಡು ಓಡೋಡಿ ಹೋಗಿ ಹಿಡಿಯಿರಿ ಈ ದುರುಳನನ್ನು ಎಂದು ಹೇಳಬೇಕೆಂದುಕೊಳ್ಳುತ್ತಿದ್ದೆನಾದರೂ ಯಾಕೋ ಅಸಹಾಯಕತೆ ನನ್ನನ್ನು ಕಾಡಲಾರಂಭಿಸಿತು...

ನನ್ನ ಸ್ಟುಡಿಯೊದ ಉಸ್ತುವಾರಿಯನ್ನು ನಮ್ಮ ಹುಡುಗರೇ ನೋಡಿಕೊಳ್ಳುತ್ತಿದ್ದರು. ಆದರೂ ಎಷ್ಟೋ ಗಿರಾಕಿಗಳು ಶ್ರೀನಾಥನೇ ಫೋಟೊ ತೆಗೆಯಬೇಕಂತಲೂ, ಅವರದು ಅದೃಷ್ಟದ ಕೈಯೆಂತಲೂ, ಇಲ್ಲವಾದರೆ ತಮ್ಮನ್ನು ಗಂಡು ಒಪ್ಪಿಕೊಳ್ಳುವುದಿಲ್ಲವೆಂತಲೂ ಹಟ ಹಿಡಿಯುತ್ತಿದ್ದರಂತೆ. ಹಾಗೂ ಒಂದೆರಡು ಫೋಟೊ ತೆಗೆಯಲು ನಾನು ಹೋದೆನಾದರೂ ಒಂದೂ ನನಗೇ ಹಿಡಿಸದೇ ಮತ್ತೊಮ್ಮೆ ಬಂದು ತೆಗೆಸಲು ಹೇಳುವಂತೆ ಹುಡುಗರಿಗೆ ಹೇಳಿ ಕಳಿಸುತ್ತಿದ್ದೆ.

ಊಟ ಸೇರುತ್ತಿರಲಿಲ್ಲ, ನಿದ್ದೆ ಬರುತ್ತಿರಲಿಲ್ಲ... ಕನಸಲ್ಲೂ ನೂರಾರು ಮುಖಗಳು, ಆ ಮುಖಗಳ ಹಿಂದಿನ ಮುಖವಾಡಗಳು ಕಣ್ಣಮುಂದೆ ಬಾಂಬೆ ಶೋನಂತೆ ಹೀಗೆ ಬಂದು ಹಾಗೆ ಹಾದುಹೋಗುತ್ತಿದ್ದವು. ಭ್ರಮೆ ಮತ್ತು ವಾಸ್ತವದಲ್ಲಿ ನರಳಾಡಿದೆ. ಕನಸಲ್ಲಿ ನನ್ನದೇ ಮುಖ ಮತ್ತೆ ಮತ್ತೆ ಕಾಣಲಾರಂಭಿಸಿತ್ತು.

ನನಗೇ ಹೀಗಾದರೆ, ಪಾಪ ಆ ಹೆಣ್ಣುಮಗಳ ಮನೆಯವರ ಪಾಡೇನಾಗಿರಬಾರದು. ಈಗಿದ್ದ ಹುಡುಗಿ, ಈಗಿಲ್ಲವೆಂದರೆ ನಂಬುವುದಾದರೂ ಹೇಗೆ? ಅದೂ ಭೀಭತ್ಸ್ಯವಾಗಿ... ಒಂದು ಕ್ಷಣ, ನನ್ನ ತಾಯಿಯೂ, ಹೆಂಡತಿಯೂ, ಮಗಳೂ ಕಣ್ಮುಂದೆ ಬಂದು ಹೋದರು. ಝಲ್ಲನೆ ಬೆವರಿದೆ. ನನಗರಿವಿರದೇ ನಡುಗಿದೆ. ನಾನೂ ಗಂಡೆಂಬುದನ್ನೂ ಮರೆತು, ಗಂಡು ಸಂತಾನ ಈ ಭೂಮಿ ಮೇಲೆ ಇರುವವರೆಗೂ ಹೆಣ್ಣುಗಳು ನಿರುಮ್ಮಳವಾಗಿ ಬದುಕಲು ಸಾಧ್ಯವಿಲ್ಲ ಎಂಬ ಭಾಷ್ಯ ಬರೆದೆ. ಕನಿಷ್ಟ ಇಂಥ ದೌರ್ಜನ್ಯ ಎಸಗುವವರ ಪುರುಷತ್ವದ ನರಗಳನ್ನಾದರೂ ಕತ್ತರಿಸಿ ಷಂಡರನ್ನಾಗಿಸಬೇಕಿತ್ತೆಂದುಕೊಂಡೆ...

ಒಂದು ರಾತ್ರಿ ಡ್ರಾಯಿಂಗ್‌ಬುಕ್‌ನ ಮೇಲೆ ಪೆನ್ಸಿಲ್‌ಗಳನ್ನು ಹರಡಿಕೊಂಡು ಕಾಲ್ಪನಿಕ ಮುಖಗಳನ್ನು ಬರೆಯುತ್ತ ಬರೆಯುತ್ತ ಹಾಗೇ ನಿದ್ದೆ ಹೋಗಿದ್ದೆ. ನಿಜ. ಕನಸಲ್ಲೂ ಮತ್ತೆ ಮತ್ತೆ ನನ್ನದೇ ಮುಖ, ನನ್ನದೇ ಫೋಟೊದಂತೆ ಕಣ್ಣೆದುರು ಬರುತ್ತಿತ್ತು. ಪ್ರಜ್ಞಾಪೂರ್ವಕವಾಗಿ ಅದು ನನ್ನದೇ ಪ್ರತಿಬಿಂಬ, ನನ್ನ ಮನಸ್ಸಿಗೇನೋ ಗಾಸಿಯಾಗಿದೆ, ಅದಕ್ಕೇ ಅದೇ ಮುಖ ಮತ್ತೆ ಮತ್ತೆ ಕಾಣುತ್ತಿದೆ



ಎಂದು ಸಮಾಧಾನಿಸಿಕೊಂಡೆ. ಆದರೆ... ಆದರೆ... ಬೆಳಗ್ಗೆ ಎದ್ದು ನೋಡುತ್ತೇನೆ, ಬಣ್ಣದ ಅಬ್‌ಸ್ಟ್ರಾಕ್ಟ್ ಆರ್ಟ್ ಮಾಡಲೆಂದು ನಿಲ್ಲಿಸಿದ್ದ ಕ್ಯಾನ್ವಾಸಿನ ಮೇಲೆ ಅದೇ ಚಿತ್ರ ನನ್ನನ್ನು ನೋಡಿ ಗಹಗಹಿಸಿ ನಕ್ಕಂತಾಯಿತು. ನಾನು ಅದ್ಯಾವಾಗ ಎದ್ದು ಈ ಚಿತ್ರ ಬರೆದೆನೋ ಗೊತ್ತೇ ಆಗುತ್ತಿಲ್ಲ. ಮತ್ತೆ ಮತ್ತೆ ನೆನಪಿಸಿಕೊಂಡೆ. ನನಗೆ ಎಚ್ಚರವಾದ ನೆನಪೇ ಆಗುತ್ತಿಲ್ಲ. ಅದರೂ ಅದು ಹೇಗೆ ಆ ಚಿತ್ರ ರೂಪುಗೊಂಡಿತು? ಬೇರೆ ಇನ್ಯಾರಾದರೂ ಬಂದು ಬರೆದಿಟ್ಟು ಹೋಗಲು ಸಾಧ್ಯವೇ ಎಂದು ಪರಾಮರ್ಶಿಸಿದೆ. ಸಾಧ್ಯವೇ ಇಲ್ಲ. ಮನೆಯವರ್‍ಯಾರಿಗೂ ಈ ಕಲೆ ಸಿದ್ಧಿಸಿಲ್ಲ. ಅಲ್ಲದೇ ಆ ಸ್ಟ್ರೋಕ್‌ಗಳು ನನ್ನ ಸ್ಟ್ರೋಕ್‌ಗಳೇ ಆಗಿವೆ. ಅಂದರೆ? ಸುಪ್ತಾವಸ್ಥೆಯಲ್ಲಿ ನಾನೇ ಬರೆದ ಚಿತ್ರವೇ? ಕಣ್ಣು ಇನ್ನೂ ಪೂರ್ಣ ನಿದ್ದೆಯನ್ನು ಕಳಕೊಂಡಿರದೇ ಉರಿಯುತ್ತಿದೆ. ಅಂದರೆ ನಾನೇ ಬರೆದಿದ್ದೇನೆ! ಹಾಗಿದ್ದರೆ ಆ ಕೊಲೆಗಾರ ನಾನೆಯೇ? ಅಥವಾ ನನ್ನಂತೆಯೇ ಇರುವ ಅವಳಿ ಸಹೋದರನೇ? ನನ್ನ ವಂಶಾವಳಿಯನ್ನೆಲ್ಲ ಒಮ್ಮೆ ಮನಸ್ಸಿನಲ್ಲಿ ತಂದುಕೊಂಡೆ. ಯಾರೂ ನನ್ನಂತಿಲ್ಲವಲ್ಲ.

ಬೆಳಗ್ಗಿನ ಶೌಚ ಸ್ನಾನಾದಿಗಳನ್ನು ಮಾಡುವಾಗ ಸಿಕ್ಕ ಏಕಾಂತದಲ್ಲಿಯೂ ಆಲೋಚಿಸುತ್ತಿದ್ದೆ. ಒಂದು ಗಟ್ಟಿ ನಿರ್ಧಾರ ಮಾಡಿದೆ. ಇದಕ್ಕಿಂತಲೂ ಸೂಕ್ತ ಚಿತ್ರ ಬರೆಯಲು ನನ್ನಿಂದ ಸಾಧ್ಯವೇ ಇಲ್ಲ, ಇದೇ ಚಿತ್ರವನ್ನೇ ನನ್ನ ಅಂತಿಮ ಆಯ್ಕೆ ಎಂದು ಪೊಲೀಸರಿಗೆ ಕೊಟ್ಟುಬಿಡುವುದೆಂದು. ಅವರು ನನ್ನನ್ನೇ ಗುಮಾನಿಸುವುದಿಲ್ಲವೇ? ಅಥವಾ ನನಗೆ ಹುಚ್ಚೆಂದು ಸುಮ್ಮನಾಗಿಬಿಡುವರೇ?

ಉದ್ವೇಗವನ್ನು ತಡೆಯಲಾರದೇ ಪೂರ್ತಿ ಸ್ನಾನವನ್ನೂ ಮಾಡದೇ ಹೊರಬಂದೆ. ಕ್ಯಾನ್ವಾಸಿನ ಕಟ್ಟಿನ ಒಳಗಿದ್ದ ಆ ಚಿತ್ರವನ್ನು ಸಮಾನಾಂತರವಾಗಿ ಕತ್ತರಿಸಿ, ಸುರುಳಿ ಮಾಡಿಕೊಂಡು ಕವರ್‌ವೊಂದರೊಳಕ್ಕೆ ತುರುಕಿಕೊಂಡೆ. ಸೀದಾ ಸ್ಕೂಟರನ್ನೇರಿ ಎಸ್.ಪಿ. ಕಚೇರಿಗೆ ದೌಡಾಯಿಸಿದೆ. ಯಾರೆಂದರೆ ಯಾರೂ ಇನ್ನೂ ಬಂದಿರಲಿಲ್ಲ. ‘ಅರ್ಜೆಂಟ್ ಇದ್ದರೆ ಯಾದವ್ ಸಾಹೇಬರ ಕ್ವಾರ್ಟರ್ಸ್ ಇಲ್ಲೇ ಇದೆ, ಬೇಕಾದರೆ ಹೋಗಿ...’ ಎಂದ ಸೆಂಟ್ರಿ. ಆ ಐಡಿಯಾ ಕೊಟ್ಟು ಒಳ್ಳೆಯದನ್ನು ಮಾಡಿದ ಎಂದು ಥ್ಯಾಂಕ್ಸ್ ಹೇಳಿ ಓಡಿದೆ. ಸರ್, ಕಳ್ಳ ಸಿಕ್ಕಿಬಿಟ್ಟ ಎನ್ನುವಷ್ಟು ಆವೇಗದಿಂದ ಏದುಸಿರು ಬಿಡುತ್ತ ಓಡಿ, ಅವರು ಬಾಗಿಲು ತೆಗೆಯುವುದಕ್ಕೂ ಕಾಯದೇ ಒಳಕ್ಕೆ ನುಗ್ಗಿ ಅವರ ಕೈಗೆ ಅದನ್ನು ಹಸ್ತಾಂತರಿಸಿ ಸಂತೃಪ್ತಿಯ ನಿಟ್ಟುಸಿರುಬಿಟ್ಟೆ. ಅವರು ಅಷ್ಟೇ ನಿರ್ಲಿಪ್ತರಾಗಿ ಆ ಚಿತ್ರವನ್ನೊಮ್ಮೆ, ನನ್ನ ಮುಖವನ್ನೊಮ್ಮೆ ನೋಡಿ, ಸರಿ, ಹೋಗೆನ್ನುವಂತೆ ತಲೆಯಾಡಿಸಿದರು. ಅವರಿಂದ ಒಂದು ಅಪ್ರಿಸಿಯೇಷನ್ನಾದರೂ ಸಿಗುತ್ತದೆಂದುಕೊಂಡಿದ್ದ ನಾನು ನಿರಾಶನಾಗಿ ಹೊರಬಂದೆ.

ಯಾವುದೋ ದುಗುಡ ಅವತ್ತು ನನ್ನನ್ನು ನನ್ನ ಕೆಲಸ ಮಾಡಲು ಬಿಡಲಿಲ್ಲ. ಏನೋ ಒಂಥರಾ ಆಲಸ್ಯ... ನಿದ್ದೆ ಮಾಡಬೇಕೆನ್ನಿಸಿದರೂ ನಿದ್ರೆ ಬರುತ್ತಿಲ್ಲ... ಪೊಲೀಸರು ಆ ಚಿತ್ರದ ಆಧಾರದ ಮೇಲೆ ನನ್ನನ್ನೇ ಬಂದು ಹಿಡಿದು ಎಳೆದೊಯ್ಯಬಹುದೇ ಎಂಬ ತಲ್ಲಣ...

ನನ್ನ ನಿರೀಕ್ಷೆ ಹುಸಿಯಾಗಲಿಲ್ಲ. ಸಂಜೆಗೇ ನನಗೆ ಪೊಲೀಸ್ ಠಾಣೆಯಿಂದ ಕರೆಬಂತು. ಅಳುಕಿನಿಂದಲೇ ಹೋದೆ. ಲಾಕಪ್ಪಿನ ಬಾರುಗಳ ಹಿಂದೆ ನಿಂತಿದ್ದ ಕೊಲೆಗಾರನನ್ನು ನೋಡಿ ಹೌಹಾರಿಹೋದೆ. ನನ್ನದೇ ಕಪ್ಪನೆಯ ದುಂಡುಮುಖ, ನನ್ನದೇ ಗುಂಗುರು ಕೂದಲು, ನನ್ನದೇ ಉದ್ದನೆಯ ಮೂಗು, ನನ್ನದೇ ಗೋಲಿಯಂಥ ಕಣ್ಣುಗುಡ್ಡೆ...

ಪೊಲೀಸಪ್ಪ, ‘ಇವನು ಬ್ಲೇಡ್‌ಮಂಜ ಅಂತ. ಆ ಹುಡುಗಿಯ ಮೊಲೆಗಳನ್ನು ಬ್ಲೇಡ್‌ನಿಂದ ಕೊಯ್ದದ್ದನ್ನು ನೋಡಿಯೇ ಇವನೇ ಇರಬೇಕು ಅಂತ ಅನುಮಾನ ಬಂದಿತ್ತು. ನಿಮ್ಮ ರೇಖಾಚಿತ್ರ ಸಿಕ್ಕಿದ ಮೇಲೆ ಸಾಕ್ಷಿಯ ಅಗತ್ಯವೇ ಇಲ್ಲ ಅಂತ ಒದ್ದು ಒಳಗ್ಹಾಕಿದ್ದೀವಿ... ಅವನೂ ತಪ್ಪನ್ನ ಒಪ್ಪಿಕೊಂಡಿದ್ದಾನೆ... ಥ್ಯಾಂಕ್ಯು...’ ಅಂದ.

ನನಗೆ ತಲೆ ಗಿರ್ರೆಂದಂತಾಗಿ ಅಲ್ಲೇ ಕುಸಿದೆ.

ಪ್ರತಿಕ್ರಿಯಿಸಿ: feedback@sudha.co.in